ದಿನಾಂಕ:06.08.2024 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

ಮುಂದುವರೆದ ಪಾಟಿಸವಾಲು: ಪ್ರತಿವಾದಿಗಳ ಪರ ಶ್ರೀ. ಕೆ.ವಿ.ಎನ್., ವಕೀಲರಿಂದ:

ನನ್ನ ಅಜ್ಜನಾದ ವೈ.ಆರ್. ವೆಂಕಟರೆಡ್ಡಿ ಅವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿ. ಮೊದಲನೆ ಹೆಂಡತಿ ಅಕ್ಕುಲಮ್ಮ ಮತ್ತು ಎರಡನೆ ಹಂಡತಿ ಬಯ್ಯಮ್ಮ ಇರುತ್ತಾರೆ ಎಂದರೆ ಸರಿ. ಅಕ್ಕುಲಮ್ಮ ಮೃತಪಟ್ಟಿದ್ದು, ಅವರ ಮಗನೆ 1 ನೇ ಪ್ರತಿವಾದಿಯಾದ ಜಯರಾಮರೆಡ್ಡಿ ಇರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಅವರಿಗೆ ಲಕ್ಷ್ಮೀದೇವಮ್ಮ ನವರು ಅಕ್ಕ ಆಗಬೇಕು. ಅವರು ಈಗ ಮೃತಪಟ್ಟಿರುತ್ತಾರೆ. ಲಕ್ಷ್ಮೀದೇವಮ್ಮ ಅವರಿಗೆ ಮೂರು ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರು ರೆಡ್ಡಿ ಪ್ರಸಾದ್, ಬಾಬುರೆಡ್ಡಿ ಮತ್ತು ರವೀಂದ್ರನಾಥ್ ಇರುತ್ತಾರೆ ಎಂದರೆ ಸರಿ. ಅವರಲ್ಲಿ ರವೀಂದ್ರನಾಥ್ ಮೃತಪಟ್ಟಿದ್ದು, ರೆಡ್ಡಿ ಪ್ರಸಾದ್ ಮತ್ತು ಬಾಬುರೆಡ್ಡಿ ಜೀವಂತ ಇರುತ್ತಾರೆ. ಸದರಿ ಲಕ್ಷ್ಮೀದೇವಮ್ಮ ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ. ಕೋಲಾರದ ನ್ಯಾಯಾಲಯದಲ್ಲಿ ಲಕ್ಷ್ಮೀದೇವಮ್ಮ ಅವರ ಮಕ್ಕಳು ಮತ್ತು 1 ನೇ ಪ್ರತಿವಾದಿ ಕೋಲಾರದ ನ್ಯಾಯಾಲಯದಲ್ಲಿ ರಾಜೀಮಾಡಿಕೊಂಡಿರುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು, ಸದರಿ ರಾಜೀಗೂ ನಮಗೂ ಸಂಬಂಧ ಇರುವುದಿಲ್ಲ ಎಂದರೆ ನುಡಿಯುತ್ತಾರೆ. ಸದರಿ ರೆಡ್ಡಿಪ್ರಸಾದ್ ಮತ್ತು ಬಾಬುರೆಡ್ಡಿ ನನ್ನ ಅತ್ತೆ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರಿಗೂ ಕೂಡ ಈ ದಾವಾ ಆಸ್ತಿಯೇಲ್ಲಿ ಭಾಗ ಬರಬೇಕು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಈಗಾಗಲೇ ಭಾಗ ಕೊಟ್ಟಾಗಿದೆ ಎಂದು ನುಡಿಯುತ್ತಾರೆ. ಹಾಗೆಂದು ರೆಡ್ಡಿಪ್ರಸಾದ್ ಮತುತ ಬಾಬು ರೆಡ್ಡಿ ಅವರೇ ನನ್ನೊಂದಿಗೆ ಹೇಳಿರುತ್ತಾರೆ. ಆ ರೀತಿಯಾಗಿ ಅವರಿಗೆ ಭಾಗ ಕೊಟ್ಟ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕೋಲಾರದ ನ್ಯಾಯಾಲಯದಲ್ಲಿ ಯಾವ ಸರ್ವೇ ನಂಬರ್ ಆಸ್ತಿಗಳ ಬಗ್ಗೆ ರಾಜೀಮಾಡಿಕೊಂಡಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. 1 ನೇ ಪ್ರತಿವಾದಿ ನನ್ನ ತಂದೆ ಇರುತ್ತಾರೆ. ಅವರು ಈಗ ಜೀವಂತ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅವರನ್ನು ನೋಡಿ ಒಂದು ವರ್ಷ ಆಗಿರುತ್ತದೆ.

ಅವರು ಕಾಣೆಯಾಗಿರುವ ಬಗ್ಗೆ ನಾನು ರಾಯಲ್ಪಾಡು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತೇನೆ. ನಾನು ದೂರು ಕೊಟ್ಟ ದಿನಾಂಕ ನನಗೆ ನೆನಪಿಲ್ಲ. ಸದರಿ ದೂರಿನ ಬಗ್ಗೆ ನಾನು ಠಾಣೆಗೆ ಹೋಗಿ ವಿಚಾರಿಸಿರುತ್ತೇನೆ. ಪೊಲೀಸರು ಅವರು ಎಲ್ಲಿಯೂ ಸಿಗಲಿಲ್ಲ ಎಂದು ಹೇಳಿರುತ್ತಾರೆ. ಆ ಬಗ್ಗೆ ಪೊಲೀಸರು ಲಿಖಿತ ಹಿಂಬರಹ ಕೊಟ್ಟಿರುವುದಿಲ್ಲ. ನಾನು ಪೊಲೀಸರಿಗೆ ಕೊಟ್ಟ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ನನ್ನ ತಂದೆ ಬದುಕಿದ್ದಾರಾ ಅಥವಾ ಮೃತಪಟ್ಟಿರುತ್ತಾರಾ ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿರುವುದಿಲ್ಲ. ನನ್ನ ತಂದೆಯ ತಂಗಿಯಾದ ಮೃತ ಲಕ್ಷ್ಮೀದೇವಮ್ಮ ಅವರ ಮಕ್ಕಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ಅವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅವರಿಗೆ ಈಗಾಗಲೇ ಭಾಗ ಕೊಟ್ಟಾಗಿದೆ ಎಂದು ನುಡಿಯುತ್ತಾರೆ. ಆ ಬಗ್ಗೆ ನಾನು ಯಾವುದೆ ದಾಖಲೆ ಕೊಟ್ಟಿರುವುದಿಲ್ಲ. ನಾನು ದಾವಾ ಸ್ವತ್ತುಗಳನ್ನು ನೋಡಿರುತ್ತೇನೆ. 4 ನೇ ಪ್ರತಿವಾದಿಯ ಗಂಡ ಶ್ರೀನಿವಾಸರೆಡ್ಡಿ ಅವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರು ಬದುಕಿದ್ದಾಗ ದಾವಾ ಜಮೀನುಗಳನ್ನು ಶ್ರೀನಿವಾಸರೆಡ್ಡಿ ಅವರೇ ನೋಡಿಕೊಳುತ್ತಿದ್ದರು ಎಂದರೆ ಸರಿಯಲ್ಲ. ಲಕ್ಷ್ಮೀದೇವಮ್ಮ ಅವರ ಮಕ್ಕಳು ಈ ದಾವೆಗೆ ಅವಶ್ಯಕ ಪಕ್ಷಗಾರರು ಇರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್.ಹೆಚ್.ಆರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.